# ಚಂದ್ರಕಾಂತ ಕುಸನೂರರ ಕಥೆಗಳಲ್ಲಿ ಸಾಮಾಜಿಕ ಮೌಲ್ಯಗಳ ಪರಿಶೋಧ

**ರಾಜೇಂದ್ರಕುಮಾರ್ ಕೆ ಮುದ್ನಾಳ್**

ಪದವೀಧರ ಪ್ರಾಥಮಿಕ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಠಾಣಗುಂದಿ, ಯಾದಗಿರಿ.

**Received: 15/10/2024 ; Acepted: 01/11/2024 ; Published: 30/11/2024**

**DOI: https://doi.org/10.5281/zenodo.14246283**

## ABSTRACT:

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಥೆಗಳಿಗೆ ತನ್ನದೇ ಆದ ವಾಸ್ತವಿಕ ಚಿತ್ರಣಗಳಿವೆ. ಈ ಚಿತ್ರಣಗಳು ಸಾಂಸ್ಕೃತಿಕ ಲೋಕದ ತಲ್ಲಣಗಳನ್ನು ವಿವರಿಸುತ್ತವೆ. ಸಮುದಾಯದಲ್ಲಿರುವ ಸಾಮಾಜಿಕ ಮೌಲ್ಯ ಅಪಮೌಲ್ಯಗಳ ಕುರಿತು ಚರ್ಚೆ ನಡೆಸುತ್ತವೆ. ಬೇಕು ಬೇಡುಗಳ ಇತ್ಯರ್ಥವನ್ನು ಸಿದ್ಧಪಡಿಸುತ್ತವೆ. ಒಂದು ಆಯಾಮಕ್ಕಿಂತ ವಿಭಿನ್ನ ಆಯಾಮಗಳ ಚಿತ್ರಣವೇ ಕಥೆಗಳ ಮೊದಲ ಆದ್ಯತೆ. ಅದು ಕಥೆಗಳ ಮೌಲ್ಯವು ಹೌದು, ಜವಾಬ್ದಾರಿಯು ಹೌದು. ಒಬ್ಬ ಕಥೆಗಾರ ಚಿತ್ರಿಸುವ ಪಾತ್ರಗಳು ಸಮಾಜಕ್ಕೆ ಸಾಣೆ ಹಿಡಿಯುತ್ತವೆ. ಚಂದ್ರಕಾಂತ ಕುಸನೂರರ ಕಥೆಗಳು ವೈಯಕ್ತಿಕ ನೆಲೆಯಲ್ಲಿ ಚರ್ಚಿಸಿದರೂ ಕೂಡ ಅದು ಸಮಷ್ಟಿ ಪ್ರಜ್ಞೆಯನ್ನು ಒಳಗೊಂಡಿರುತ್ತದೆ ಎಂಬುದನ್ನು ಪಾತ್ರಗಳ ಮೂಲಕ ಗ್ರಹಿಸುವ ಸಾಧ್ಯತೆಗಳಿವೆ. ಈ ಸಂಶೋಧನಾ ಲೇಖನವು ಕುಸನೂರರ '**ಅಸಹಜ**' ಮತ್ತು '**ಎಲ್ಲಿಗೆ**' ಕಥೆಗಳಲ್ಲಿನ ಸಾಮಾಜಿಕ ಮೌಲ್ಯಗಳನ್ನು ಪರಿಶೋಧಿಸುವುದು. ಇಲ್ಲಿನ ಪಾತ್ರಗಳು ಹೇಗೆ ಸಮಾಜಕ್ಕೆ ಸ್ಪಂದಿಸುತ್ತವೆಯೋ ಅಥವಾ ಇಲ್ಲವೋ ಎಂಬುದನ್ನು ಗ್ರಹಿಸಬೇಕು. ಕತೆಗಾರರು ಸೃಷ್ಟಿಸುವ ಪಾತ್ರಗಳ ಮನೋಭೂಮಿಕೆಯನ್ನು ಅರಿಯಬೇಕಿದೆ. ಕಥೆಯ ಆರಂಭ ಹಾಗೂ ಅಂತ್ಯ ಕತೆಗಾರರು ನಿರ್ಣಯಿಸುತ್ತಾರೋ ಅಥವಾ ಓದುಗರಿಗೆ ಬಿಡುತ್ತಾರೋ ಅಥವಾ ಪಾತ್ರಗಳಿಗೆ ಬಿಡುತ್ತಾರೋ ಎಂಬ ಕುತೂಹಲ ಇವರ ಕಥೆಗಳಲ್ಲಿ ಕಂಡುಕೊಳ್ಳಬಹುದು.

ಕತೆಗಾರರು 'ಮೌಲ್ಯ' ಎಂಬ ಪದವನ್ನು ಯಾವ ನಿಟ್ಟಿನಲ್ಲಿ ಪ್ರತಿಪಾದಿಸಲು ಹೊರಟಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ. ಕಥೆಗಳಲ್ಲಿನ ಪಾತ್ರಗಳು ಏಕಮುಖಿಯಾಗಿವೆಯೋ, ಬಹುಮುಖಿಯಾಗಿ ಇವೆಯೋ, ಯಾರಿಂದಲು ಪ್ರೇರಣೆ ಪಡೆದಿವೆಯೋ, ಸ್ವ ಚಿಂತನೆಗೆ ಒಳಗಾಗಿದಿಯೋ ಎಂಬುದನ್ನು ವಿವರಿಸುವುದು ಲೇಖನದ ಮೂಲ ಉದ್ದೇಶ.

## KEYWORDS:

ಸಾಮಾಜಿಕ ಮೌಲ್ಯ, ಸಣ್ಣ ಕಥೆಗಳು, ಅಸಹಜ, ತುಕ್ಕಪ್ಪ ಮಾಸ್ತರ, ಅಂಗೈ ಅಗಲ ಆಕಾಶ, ಎಲ್ಲಿಗೆ.

ಕನ್ನಡ ಸಾಹಿತ್ಯ ಲೋಕ ಕಂಡ ಪ್ರಸಿದ್ಧ ಲೇಖಕರಲ್ಲಿ ಚಂದ್ರಕಾಂತ ಕುಸನೂರರು ಒಬ್ಬರು. ಇವರು ಕಥೆ, ಕಾದಂಬರಿ, ನಾಟಕ, ಚಿತ್ರಕಲೆಗಳಲ್ಲಿ ಅನುವಾದಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಇವರು ನಾಟಕಕಾರರಾಗಿ ಚಿತ್ರಕಲಾವಿದರಾಗಿ ಹೆಚ್ಚು ಪರಿಚಿತ. ಕಥೆಗಾರರಾಗಿ ಪರಿಚಿತರಾಗಿದ್ದು ಕಡಿಮೆ. ಮೂಲತಃ ಕಲ್ಬುರ್ಗಿ ಜಿಲ್ಲೆಯವರಾದ ಕುಸನೂರರು ಅಸಂಗತ ನಾಟಕಕಾರರಾಗಿ ಹೆಚ್ಚು ಚಿರಪರಿಚಿತ. ಬೆಕ್ಕು ಮತ್ತು ಇತರ ಕಥೆಗಳು, ತುಕ್ಕಪ್ಪ ಮಾಸ್ತರ, ಅಂಗೈ ಅಗಲ ಆಕಾಶ ಎಂಬುವು ಇವರ ಮೂರು ಕಥಾ ಸಂಕಲನಗಳು. ಇವರ ಕಥೆಗಳು ಬಹಳಷ್ಟು ಆಯಾಮಗಳನ್ನು, ವಸ್ತು ವಿಷಯಗಳನ್ನು ಒಳಗೊಂಡು ಓದುಗನನ್ನು ಮಂತ್ರಮುಗ್ಧನನ್ನಾಗಿಸುತ್ತವೆ. ಕುಸನೂರರ ಕಥೆಗಳಾದ ಅಸಹಜ, ಎಲ್ಲಿಗೆ ಕಥೆಗಳಲ್ಲಿನ ಸಾಮಾಜಿಕ ಮೌಲ್ಯಗಳ ಪರಿಶೋಧನೆಯನ್ನು ಗುರುತಿಸುವುದು ಈ ಲೇಖನದ ವೈಶಿಷ್ಟ್ಯತೆ.

ಕಥೆಗಳು ಎಲ್ಲಿ ಹೇಗೆ ಯಾವಾಗ ಹುಟ್ಟಿಕೊಳ್ಳುತ್ತವೆ ಎನ್ನುವುದು ಸ್ವತಃ ಕಥೆಗಾರನಿಗೆ ಗೊತ್ತಿರುವುದಿಲ್ಲ. ಅವು ತನ್ನಿಂದ ತಾನೆ ಹುಡುಕುತ್ತಾ ತನ್ನದೇ ಸ್ವರೂಪವನ್ನು ಪಡೆಯಲಿಚ್ಚಿಸುತ್ತವೆ ಎಂಬುದು ಅನೇಕ ಕಥೆಗಾರರ ಒಡನುಡಿ. ಹಾಗೆಂದ ಮಾತ್ರಕ್ಕೆ ಕಥೆ ಹೀಗೇ ಇರಬೇಕು ಎಂಬ ಆಲೋಚನೆ ಕೂಡ ಇರುವುದಿಲ್ಲ. ಕಥೆ ತನ್ನ ರೀತಿ ಶೈಲಿಗಳನ್ನು ಕಾಲದಿಂದ ಕಾಲಕ್ಕೆ, ಬರಹದಿಂದ ಬರಹಕ್ಕೆ, ಬರಹಗಾರನಿಂದ ಬರಹಗಾರನಿಗೆ, ವಿಭಿನ್ನ ಆಯಾಮ, ವಿನ್ಯಾಸಗಳನ್ನು ಪಡೆಯುತ್ತಾ ಸಾಗುತ್ತಿರುತ್ತವೆ.

ಅಮೇರಿಕದ ಎಡ್ಗರ್ ಅಲೆನ್ ಪೋ ಸಣ್ಣ ಕಥೆಯನ್ನು 'ಓದಲು ಅರ್ಧ ಗಂಟೆಯಿಂದ ಒಂದು ಅಥವಾ ಎರಡು ಗಂಟೆಗಳ ಕಾಲ ತೆಗೆದುಕೊಳ್ಳುವ ಸಂಕ್ಷಿಪ್ತವಾದ ಗದ್ಯ ನಿರೂಪಣೆ' ಎಂದು ಗುರುತಿಸುತ್ತಾನೆ. ಮಿರ್ಜಿ ಅಣ್ಣಾರಾಯರ ಪ್ರಕಾರ ಸಣ್ಣ ಕಥೆ ಅಂದರೆ 'ಶಕ್ಯವಿದ್ದಷ್ಟು ಕಡಿಮೆ ಪಾತ್ರಗಳ ನೆರವಿನಿಂದ ಒಳ್ಳೆಯ ಪರಿಣಾಮಕಾರಿಯಾಗುವಂತೆ ತೀರ ಸ್ವಲ್ಪ ಪ್ರಸಂಗಗಳಿಂದ ಒಂದು ಸಂಗತಿಯನ್ನು ಹೇಳುವುದು' ಎಂಬ ವಿವರಣೆಯನ್ನು ನೀಡುತ್ತಾರೆ.

ಈ ಎರಡು ವಿವರಣೆಗಳನ್ನು ಗಮನಿಸಿದಾಗ ಬಹುದೊಡ್ಡ ಮೊತ್ತದ ಆಲೋಚನೆಗಳು ನಮ್ಮನ್ನು ಸೆಳೆಯುತ್ತವೆ. ಕಿರಿಯದರಲ್ಲಿ ಹಿರಿದರ್ಥವನ್ನು ಹುಡುಕುವ ತಾಕತ್ತು ಕಥೆಗಳಿಗಿದೆ. ಕುಸನೂರರ ಕಥೆಗಳಲ್ಲಿ ಸಾಮಾಜಿಕ ಮೌಲ್ಯಗಳ ಪ್ರತಿಪಾದನೆ ಹೇಗಾಗಿದೆ? ಹೇಗಾಗಬೇಕಿತ್ತು ಎಂಬ ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಮಾಡಲಾಗಿದೆ. 'ಅಸಹಜ' ಕತೆಯು 'ತುಕ್ಕಪ್ಪ ಮಾಸ್ತರ್ ಮತ್ತು ಇತರ ಕಥೆಗಳು' ಸಂಕಲನದಲ್ಲಿದೆ. 'ಎಲ್ಲಿಗೆ' ಕಥೆಯು 'ಅಂಗೈ ಅಗಲ ಆಕಾಶ' ಕಥಾ ಸಂಕಲನದಲ್ಲಿದೆ.

'ಅಸಹಜ' ಮತ್ತು 'ಎಲ್ಲಿಗೆ' ಕಥೆಗಳು ತಮ್ಮನ್ನು ತಾವು ಪರಿಶೋಧಿಸುವ

ನಿಟ್ಟಿನಲ್ಲಿ ಮುಖ್ಯವಾಗಿವೆ. ಏಕೆಂದರೆ ಅಸಹಜಕತೆಯ ಸವಿತಾ ಮತ್ತು ಶಾಂತಾ ರಾಮ್ ಅಂತರ್ಜಾತಿ ವಿವಾಹವನ್ನು ಮಾಡಿಕೊಂಡಿದ್ದವರು. ಆಕಸ್ಮಿಕವಾಗಿ ಶಾಂತರಾಮ್ ಅವರಿಗೆ ಅಪಘಾತವಾಗಿ ಎರಡು ಕಾಲುಗಳನ್ನು ಕಳೆದುಕೊಂಡರು. ಆಗ ಅವರಿಗೆ ಕಂಪನಿಯವರು ಹಣವನ್ನು ಕೊಟ್ಟು ಹೆಂಡತಿಗೆ ನೌಕರಿಯನ್ನು ಕೂಡ ಕೊಟ್ಟರು. ಆದರೆ ಸವಿತಾಗೆ ಅಲ್ಲಿನ ಸಾಮಾಜಿಕ ಅವ್ಯವಸ್ಥೆಯನ್ನು ಕಂಡು ರಾಜೀನಾಮೆಯನ್ನು ನೀಡಿದರು. ಗಂಡ ಹೆಂಡತಿ ಅನ್ಯೋನ್ಯತೆಗೆ ಇದು ಸಾಕ್ಷಿ. ಗಂಡನ ಅಂಗವಿಕಲನಾದರೂ ಕೂಡ ಸವಿತಾ ಗಂಡನೊಂದಿಗೆ ಬದುಕಿ ಬಾಳಲು ಸಿದ್ಧವಾಗಿದ್ದರು. ಅದು ಪ್ರೀತಿಗಿರುವ ಶಕ್ತಿಯೆಂದು ಭಾವಿಸಬೇಕು. ಇಂದಿನ ದಿನಮಾನಗಳಲ್ಲಿ ಪ್ರೀತಿಸಿ ಮದುವೆಯಾದವರು ದೂರವಾಗುವುದೇ ಹೆಚ್ಚು. ತಂದೆ ತಾಯಿಗಳಿಗೆ ಇಷ್ಟವಿಲ್ಲದ ಮದುವೆಯನ್ನು ಮಾಡಿಕೊಂಡು ಜೀವನದಲ್ಲಿ ಜಿಗುಪ್ಸೆ ಹೊಂದುವವರೆ ಬಹಳ. ಜೀವನದಲ್ಲಿ ನಡೆಯುವ 'ಅಸಹಜ' ಘಟನೆಗಳು ಜೀವನವನ್ನು ಸಹಜ ಜೀವನದತ್ತ ಕೊಂಡೊಯ್ಯುತ್ತದೆ ಎಂಬುದಕ್ಕೆ ಸವಿತಾ ಕುಟುಂಬ ಮಾದರಿಯಾಗಿ ನಿಲ್ಲುವುದು. ಸವಿತಾ ತನ್ನ ಗಂಡನ ಆಸ್ಪತ್ರೆಯ ಬಿಲ್ಲಿನಿಂದ ಸೊರಗಿ ಹೋಗಿದ್ದಳು. ಹಾಗಾಗಿ ಪ್ರಸ್ತುತ ಸಮಾಜದ ಆರೋಗ್ಯದ ಬಗ್ಗೆಯೂ ಹಾಗೂ ಆಸ್ಪತ್ರೆಗಳ ಕರಾಳ ಮುಖವನ್ನು ಹೀಗೆ ವಿವರಿಸಲು ಪ್ರಯತ್ನಿಸುತ್ತಾಳೆ. ಸಾದ ನೆಗಡಿ, ಕೆಮ್ಮು ಅಂತ ಡಾಕ್ಟರ್‌ಗಳ ಹತ್ತಿರ ಹೋದರೆ, ಆಳು ಮೂಳು ಟೆಸ್ಟ್‌ಗಳಂತ ಹೇಳಿ ದುಡ್ಡನ್ನು ಸುಲಿಯುತ್ತಾರೆ. ಒಂದು ಸಾಂತ್ವನದ ಮಾತನ್ನು ಕೂಡ ಯಾವ ವೈದ್ಯರು ಆಡುವುದಿಲ್ಲ ಎಂಬ ತಕರಾರು ಸವಿತಾಳದು. ಇಂದು ಆಸ್ಪತ್ರೆಗಳು ಉದ್ಯಮದ ಮಾದರಿಯನ್ನು ಅನುಸರಿಸುತ್ತಿವೆ ಎಂಬ ಕರಾಳ ಚಿತ್ರಣವನ್ನು ಈ ಕಥೆ ನಿರೂಪಿಸುತ್ತದೆ. ಸಾಮಾಜಿಕ ಸ್ವಾಸ್ಥ್ಯ ಕಾಪಾಡಬೇಕಾದ ಆಸ್ಪತ್ರೆಗಳು ಅನಾರೋಗ್ಯಕರ ವಾತಾವರಣವನ್ನು ಸೃಷ್ಟಿಸುತ್ತಿವೆ ಎಂಬ ಅಳಲು ಕಥೆಗಾರರದು. ಸಣ್ಣತನದ ಹುಡುಕಾಟದಲ್ಲಿ ವೈದ್ಯರು ರೋಗಿಗಳನ್ನು ನೋಡುವ ಪರಿಪಾಠ ಉಂಟಾಗಿದೆ. ಹೃದಯ ವೈಶಾಲ್ಯತೆ ಕಡೆಗೆ ವೈದ್ಯರು ಹೊರಳಬೇಕಾದ ಅನಿವಾರ್ಯತೆ ಇಂದಿನ ತುರ್ತು ಅಗತ್ಯ.

**'ಎಲ್ಲಿಗೆ'** ಕಥೆಯ ಶೇಖರಪ್ಪ ಎಂಬ ಯುವಕ ಮೋಟಾರ್ ಬೈಕ್ ಅನ್ನು ಜಿದ್ದಿನಿಂದ ತೆಗೆದುಕೊಳ್ಳುತ್ತಾನೆ. ಅದರಿಂದ ಆದ ಅಸಮಾದಾನ, ಏಕಾಂಗಿತನ ಇತ್ಯಾದಿ ಅನಾನುಕೂಲತೆಗಳನ್ನು ಸವಿವರಾಗಿ ತನ್ನ ಗೆಳೆಯರೊಂದಿಗೆ ಹಂಚಿಕೊಳ್ಳುತ್ತಾನೆ. ಮೋಟಾರ್ ಬೈಕ್‌ನಿಂದ ನಾನು ಈ ಭೂಮಿಯೊಂದಿಗೆ, ಮನುಷ್ಯನೊಂದಿಗೆ, ಪ್ರಾಣಿಪಕ್ಷಿಗಳೊಂದಿಗೆ ಸಂಬಂಧವನ್ನು ಕಳೆದುಕೊಂಡಿದ್ದೇನೆ. ಹಾಗಾಗಿ ನನ್ನದೇ ಲೋಕದಲ್ಲಿ ಜೀವಿಸುವ ಒಬ್ಬ ಮಂಡೂಕನಾಗಿದ್ದೇನೆ ಎಂಬ ಅರ್ಥವನ್ನು ಒಳಗೊಂಡಂತೆ ಅವನ ಪರಿಸ್ಥಿತಿಯನ್ನು ಕತೆಗಾರರು ರಚಿಸಿದ್ದಾರೆ. ಏಕೆಂದರೆ ಇಂದಿನ ಮಾನವ ಆಧುನಿಕ ಯಂತ್ರೋಪಕರಣಗಳೊಂದಿಗೆ ಬೆರೆತುಕೊಂಡಿದ್ದಾನೆ ಹೊರತು,

ಮಾನವೀಯ ಸಂಬಂಧಗಳನ್ನು ಬೆಸೆಯುವ ಆಲೋಚನೆಯನ್ನು ಕೈ ಬಿಟ್ಟಿದ್ದಾನೆ. ದುಡ್ಡು ದುಡ್ಡು ಎನ್ನುತ್ತಾ ತನ್ನ ಆಯುಷ್ಯವನ್ನೆಲ್ಲಾ ಕಳೆಯುತ್ತಿದ್ದಾನೆ. ಪ್ರಕೃತಿಯೊಂದಿಗೆ ಜೀವಿಸಬೇಕೆಂಬ ಅರಿವು ಕೂಡ ಅವನಿಗಿಲ್ಲದಾಗಿದೆ. ತಾನು ಪ್ರೀತಿಸುವ ಹೊಲಗದ್ದೆ, ತೋಟ ಪ್ರಾಣಿ ಪಕ್ಷಿಗಳಿಂದ ಸಿಗುವ ಸಮಾದಾನ ಪ್ರೀತಿ ಈ ಆಧುನಿಕ ಯಂತ್ರೋಪಕರಣಗಳಿಂದ ಸಿಗಲು ಸಾಧ್ಯವೇ ಎಂದು ಪ್ರಶ್ನಿಸಿಕೊಳ್ಳುತ್ತಾನೆ. ಟಿ.ವಿ., ಮೊಬೈಲ್ ಐಶಾರಾಮಿ ಕಾರು ಬಂಗ್ಲೆಗಳು ಅಂತರಾತ್ಮವನ್ನು ಮುಟ್ಟದೆ ಇರುವಂತಹ ವಸ್ತುಗಳಾಗಿ ಪರಿಣಮಿಸಿವೆ. ಬಾಹ್ಯವಾಗಿ ಇವೆಲ್ಲವೂ ಅವಶ್ಯಕತೆ ಇದೆ. ಆದರೆ ಅವೇ ಜೀವನದ ಉಸಿರಾಗಲು ಸಾಧ್ಯವೇ ಇಲ್ಲ ಎಂಬ ಚಿತ್ರಣವನ್ನು ಕಥೆಯ ನಾಯಕ ಶೇಖರನ ಮೂಲಕ ಕಟ್ಟಿಕೊಡಲು ಕುಸನೂರರು ಪ್ರಯತ್ನಿಸುತ್ತಾರೆ.

ಸಾಮಾಜಿಕ ಜಾಲತಾಣಗಳು ಮನುಷ್ಯನ ಸಂಬಂಧವನ್ನು ಯಾಂತ್ರಿಕಗೊಳಿಸಿ, ಪ್ರಾಯೋಗಿಕವಾಗಿ ಸೋತಿವೆನಿಸುತ್ತದೆ. ಏಕೆಂದರೆ ಒಬ್ಬ ವ್ಯಕ್ತಿಯು ಕೂಡ ಮುಖಾಮುಖಿಯಾಗಿ ಮಾತನಾಡದೆ ಎಲ್ಲವೂ ಫೇಸ್ಬುಕ್, ವಾಟ್ಸಾಪ್, ಇನ್‌ಸ್ಟಾಗ್ರಾಂ ಹುಳಗಳಿಗೆ ದಾಸರಾಗಿದ್ದಾರೆ. ಇದರಿಂದ ಬಿಡುಗಡೆ ಹೊಂದುವ ಅನಿವಾರ್ಯತೆ ಪ್ರತಿಯೊಬ್ಬರಿಗೆ ಇದೆ ಎಂದು ಕಥೆ ಸೂಚಿಸುತ್ತಿದೆ.

ಸಾಮಾಜಿಕ ಜಾಲತಾಣಗಳಿಗೆ ಸಾಮಾಜಿಕ ಜವಾಬ್ದಾರಿ ಇಲ್ಲದೆ ಹೋದರೆ ಏನೆಲ್ಲಾ ಅನಾಹುತಗಳು ಸಂಭವಿಸುತ್ತವೆ ಎಂಬ ಎಚ್ಚರಿಕೆ ಗಂಟೆಯನ್ನು ಕೂಡ ಈ ಕಥೆ ನಿರೂಪಿಸುತ್ತದೆ. ಮನುಷ್ಯ ಭೂಮಿಯೊಂದಿಗೆ ಸಂಬಂಧವನ್ನು ಕಳೆದುಕೊಂಡು ಭೂಮಿಯ ಮೇಲೆ ಉತ್ಪಾದನೆಯಾಗುವ ವಸ್ತುಗಳನ್ನು ಪ್ರೀತಿಸುತ್ತಿದ್ದಾನೆ. ಭೂಮಿ ತತ್ವದ ಅರಿವನ್ನು ಮನುಷ್ಯನಿಗೆ ಉಣಬಡಿಸುವ ಸಂದರ್ಭದಲ್ಲಿ ನಾವು ಕೋವಿಡ್ ಅಂತಹ ಮಹಾಮಾರಿಯನ್ನು ಗಮನಿಸಿದ್ದೇವೆ. ಎಲ್ಲರೂ ಮಹಾನಗರಗಳತ್ತ ಮುಖ ಮಾಡಿದಾಗ ಜನರು ಮತ್ತೆ ಮೂಲ ಮನೆಯನ್ನು ತಲುಪಲು ಎಷ್ಟೊಂದು ಕಷ್ಟ ಅನುಭವಿಸಬೇಕಾಯಿತು ಎಂಬುದನ್ನು ನಾವೆಲ್ಲರೂ ಕೋವಿಡ್ ಸಂದರ್ಭದಲ್ಲಿ ಅರಿತಿದ್ದೇವೆ. ಇದು ನಮಗೆ ಪಾಠ ಎಂದು ನಾವು ಅರಿತುಕೊಂಡಾಗ ಉತ್ತಮ ಜೀವನ ಬದುಕಲು ಸಾಧ್ಯ. ನೆಮ್ಮದಿಯ ಉಸಿರು ನಮ್ಮದಾಗಲಿ ಎಂಬ ಆಶಯ ಕಥೆಯದ್ದಾಗಿದೆ.

**ಅಧ್ಯಯನದ ಫಲಿತಗಳು:**

1. ತನ್ನೊಂದಿಗೆ ತಾನು ಇತರರನ್ನು ಅರಿಯುವ ಪ್ರಯತ್ನದಲ್ಲಿ ಮಹಿಳೆ ಸಾಮಾಜಿಕ ಸಾಮರಸ್ಯವನ್ನು ಕಾಪಾಡಿಕೊಳ್ಳುವಲ್ಲಿ ಈ ತರಹದ ಪಾತ್ರಗಳ ಅವಶ್ಯಕತೆ ಸಮಾಜಕ್ಕಿದೆ.
2. ಆಧುನಿಕ ಯಂತ್ರಗಳಿಗೆ ಮನುಷ್ಯ ಮಾರುಹೋಗದೆ, ಪ್ರಕೃತಿದತ್ತವಾದ ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ ಸಂಕಲಗಳೊಂದಿಗೆ ಕಾಲ ಕಳೆಯುವುದೇ ಅವನ

ಉನ್ನತ ಧ್ಯೇಯವಾಗಲಿ ಎಂಬ ಆಶಾಭಾವನೆ ಇದೆ.

3. ಸಾಮಾಜಿಕ ಸ್ವಾಸ್ಥ್ಯ ಕೆಡಿಸುವ ವ್ಯವಸ್ಥೆಯ ವಿರುದ್ಧ ವಿವಿಧ ಕ್ಷೇತ್ರಗಳಲ್ಲಿ ಮಾನವೀಯತೆಯ ಆಧಾರದಲ್ಲಿ ಕೆಲಸ ಮಾಡಬೇಕಾದ ಜರೂರು ನಮ್ಮದಿದೆ.
4. ಗಂಡು-ಹೆಣ್ಣು ಎಂಬ ಭೇದಭಾವವಿಲ್ಲದೆ ಪ್ರಕೃತಿಯನ್ನು ಸಮನ್ವಯ ದೃಷ್ಟಿಕೋನದಿಂದ ನೋಡಿದಾಗ ಮಾನವನ ಬದುಕು ಇನ್ನಷ್ಟು ಸ್ವಾಸ್ಥ್ಯವಾಗುವುದು.
5. ಇಲ್ಲಿನ ಪಾತ್ರಗಳು ಅಂತರಾವಲೋಕನ ಮಾಡಿಕೊಳ್ಳುವುದರ ಮೂಲಕ ಸಮಾಜದ ಅಸಮಾನತೆ ತೊಡೆಯಲು ದಾರಿದೀಪವಾಗಿವೆ.

**ಆಕರ ಗ್ರಂಥಗಳು:**

1. ಚಂದ್ರಕಾಂತ ಕುಸನೂರ. (2008). ಅಂಗೈ ಅಗಲ ಆಕಾಶ. ದಾಮಿನಿ ಸಾಹಿತ್ಯ. ಬೆಂಗಳೂರು.
2. ಚಂದ್ರಕಾಂತ ಕುಸನೂರ. (2009). ತುಕ್ಕಪ್ಪ ಮಾಸ್ತರ ಮತ್ತು ಇತರ ಕಥೆಗಳು. ಮನೋಹರ ಗ್ರಂಥ ಮಾಲಾ. ಧಾರಾವಾಡ.

**ಪರಾಮರ್ಶನ ಗ್ರಂಥಗಳು:**

1. ನಾಗಭೂಷಣ ಸ್ವಾಮಿ ಓ. ಎಲ್. (2011). ವಿಮರ್ಶೆಯ ಪರಿಭಾಷೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.
2. ಆಮೂರ ಜಿ. ಎಸ್. (2012). ಕನ್ನಡ ಕಥನ ಸಾಹಿತ್ಯ: ಸಣ್ಣ ಕಥೆ. ಪ್ರಿಯದರ್ಶಿನಿ ಪ್ರಕಾಶನ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.